




# ಆಲಂಬಜಾರ್ ಮಠದ ಹಸ್ತಾಂತರ ಕಾರ್ಯಕ್ರಮ

**ಕೊ**ಲ್ಕತ್ತೆಯಲ್ಲಿರುವ ಆಲಂಬಜಾರ್ ಮಠವು ಬಾರಾನಗರ ಮಠದ ನಂತರ ರಾಮಕೃಷ್ಣ ಮಹಾಸಂಘದ ಎರಡನೆಯ ಮಠವಾಗಿದ್ದು, ೧೮೯೧ ನವೆಂಬರ್ ತಿಂಗಳಿನಿಂದ ೧೮೯೮ರ ಫೆಬ್ರವರಿ ತನಕ ಅಲ್ಲಿ ಶ್ರೀರಾಮಕೃಷ್ಣರ ಬಹುಪಾಲು ಮಂದಿ ನೇರ ಶಿಷ್ಯಂದಿರು ವಾಸವಾಗಿದ್ದರು. ೨೦೨೨ರ ಡಿಸೆಂಬರ್‌ನಲ್ಲಿ ಬೇಲೂರು ಮಠವು ಆಲಂಬಜಾರ್ ಮಠವನ್ನು ಖರೀದಿಸಿ, ಅಲ್ಲಿ ಒಂದು ಶಾಖಾಮಠವನ್ನು ಆರಂಭಿಸುವುದಾಗಿ ಪ್ರಕಟಿಸಿತು. ಹಳೆಯ ಮಠದ ಕಟ್ಟಡವು ಶಿಥಿಲವಾಗಿದ್ದು, ಕೆಲವು ಅಗತ್ಯವಾದ ದುರಸ್ತಿಕಾರ್ಯಗಳನ್ನು ಮಾಡಿದ ಬಳಿಕ, ಅಲ್ಲಿ ರಾಮಕೃಷ್ಣ ಮಠದ ಶಾಖೆಯನ್ನು ಆರಂಭಿಸುವುದಾಗಿ ಈ ಪ್ರಕಟಣೆಯು ತಿಳಿಸಿತ್ತು.

ಈ ಐತಿಹಾಸಿಕ ಹಾಗೂ ಪವಿತ್ರ ಸ್ಥಾನವನ್ನು ರಾಮಕೃಷ್ಣ ಮಠಕ್ಕೆ ಹಸ್ತಾಂತರಿಸಿ, ಆಲಂಬಜಾರ್ ಮಠವನ್ನು ರಾಮಕೃಷ್ಣ ಮಹಾಸಂಘದ ಶಾಖಾಕೇಂದ್ರವಾಗಿ ಪರಿಗಣಿಸುವ ಸಲುವಾಗಿ ೨೦೨೩ರ ಮಾರ್ಚ್ ೧೮ರಂದು ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗಿತ್ತು. 'ರಾಮಕೃಷ್ಣ ಸತ್ಯಾನಂದ ಆಲಂಬಜಾರ್ ಮಠ' ವೆಂಬ ಹೆಸರಿನಲ್ಲಿ ನಡೆಯುತ್ತಿದ್ದ ಈ ಮಠವನ್ನು ಅಧಿಕೃತವಾಗಿ ಬೇಲೂರು ಮಠಕ್ಕೆ ಹಸ್ತಾಂತರಿಸಲಾಯಿತು. ಈ ಪ್ರಯುಕ್ತ ನಡೆದ ಕಾರ್ಯಕ್ರಮದಲ್ಲಿ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ಭಾಗವಹಿಸಿ ಆಶೀರ್ವಚನ ನೀಡಿದರು. ಇವರೊಂದಿಗೆ ಉಪಾಧ್ಯಕ್ಷರುಗಳಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್, ಸುಹಿತಾನಂದಜಿ ಮಹಾರಾಜ್, ಭಜನಾನಂದಜಿ ಮಹಾರಾಜ್ ಹಾಗೂ ಗಿರೀಶಾನಂದಜಿ ಮಹಾರಾಜ್ ಅವರು ಕೂಡ ಭಾಗವಹಿಸಿ ಆಶೀರ್ವಚನ ನೀಡಿದರು.

ವೇದಘೋಷಗಳೊಂದಿಗೆ ಸಾಯಂಕಾಲ ೪ ಘಂಟೆಗೆ ಕಾರ್ಯಕ್ರಮ ಆರಂಭವಾಯಿತು. ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸುವೀರಾನಂದಜಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಬಾರಾನಗರ ಮಠದ ಕಾರ್ಯದರ್ಶಿಗಳಾದ ಸ್ವಾಮಿ ಶಾರದಾತ್ಮಾನಂದರು ಸ್ವಾಗತ ಕೋರಿದರು. ರಾಮಕೃಷ್ಣ ಮಹಾಸಂಘದ ಸಹ-ಕಾರ್ಯದರ್ಶಿಗಳಾದ ಸ್ವಾಮಿ ಬೋಧಸಾರಾನಂದಜಿಯವರು ಈ ಮಠದ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಪರಮಾಧ್ಯಕ್ಷರ ಹಾಗೂ ಉಪಾಧ್ಯಕ್ಷರುಗಳ ಆಶೀರ್ವಚನಗಳ ತರುವಾಯ ಪ್ರೊ. ಸುಗತ ರಾಯ್, ಎಂ.ಪಿ, ಶ್ರೀ ತಾಪಸ್ ರಾಯ್, ಎಂ.ಎಲ್.ಎ., ಅಪರ್ಣಾ ಮೌಲಿಕ್, ನೀಲು ಗುಪ್ತಾ, ಆರಿಫ್ ಹುಸೈನ್ ಮುಂತಾದ ಸಾರ್ವಜನಿಕ ಗಣ್ಯರು ಭಾಷಣ ಮಾಡಿದರು. ಸಹ-ಕಾರ್ಯದರ್ಶಿಗಳಾದ ಸ್ವಾಮಿ ಬಲಭದ್ರಾನಂದಜಿಯವರು ವಂದನಾರ್ಪಣೆ ಮಾಡಿದರು. ಸಮಾರೋಪ ಗೀತೆಯೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.





Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020